# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 983(1084)

ಉತ್ತರಿಸಬೇಕಾದ ದಿನಾಂಕ : 18.12.2024

ಉತ್ತರಿಸಬೇಕಾಗಿರುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವ ಕಛೇರಿಗಳಲ್ಲಿ ಗುತ್ತಿಗೆ ಮತ್ತು ಖಾಯಂ ಆಧಾರಿತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರವನ್ನು ನೀಡುವುದು) | ರಾಜ್ಯದಲ್ಲಿನ ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವ ಕಛೇರಿಗಳಲ್ಲಿ ಗುತ್ತಿಗೆ ಮತ್ತು ಖಾಯಂ ಆಧಾರಿತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದ ಕಂದಾಯ ಕಛೇರಿಗಳನ್ನು ಒಂದೇ ಸ್ಥಳದಲ್ಲಿ ಹಲವಾರು ವರ್ಷಗಳ ಕಾಲ ಸಿಬ್ಬಂದಿಗಳು ಗುತ್ತಿಗೆಯಾಧಾರಿತವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಇದು ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುವುದಿಲ್ಲವೇ; ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು; | ರಾಜ್ಯದ ಕಂದಾಯ ಕಛೇರಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರಿಂದ ಭ್ರಷ್ಟಾಚಾರ ಎಸಗಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಇ) | ಪ್ರಸ್ತುತ ಖಾಲಿಯಿರುವ ಹುದ್ದೆಗಳ ನೇಮಕಾತಿಗಾಗಿ ಯಾವ ಕ್ರಮಕೈಗೊಳ್ಳಲಾಗಿದೆ; (ಹುದ್ದೆಗಳಿಗನುಸಾರ ಮಾಹಿತಿಯನ್ನು ಒದಗಿಸುವುದು) | • ಬೆರಳಚ್ಚುಗಾರರು, ಗ್ರೂಪ್-ಡಿ, ವಾಹನ ಚಾಲಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ.<br>• ಗ್ರಾಮ ಆಡಳಿತ ಅಧಿಕಾರಿಯ 1000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಧಿಸೂಚನೆ ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್-04/2024 (ಕೆಕೆ), ಇಡಿ/ಕೆಇಎ/ಆಡಳಿತ/ಸಿಆರ್-04/2024 (ಆರ್‌ಪಿಸಿ), ದಿನಾಂಕ: 21.02.2024 ನ್ನು ಹೊರಡಿಸಲಾಗಿರುತ್ತದೆ. |

| | | |
|---|---|---|
| | | • ಪ್ರಥಮ ದರ್ಜೆ ಸಹಾಯಕರು & ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ ಹಾಗೂ ಖಾಲಿ ಹುದ್ದೆಗಳನ್ನು ಕಾಲಕಾಲಕ್ಕೆ ನೇರ ನೇಮಕಾತಿ, ಅನುಕಂಪದ ಆಧಾರದ ಮೇಲೆ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ.<br>• ಶಿರಸ್ತೇದಾರ್/ಉಪ ತಹಶೀಲ್ದಾರ್ ಹುದ್ದೆಗಳನ್ನು ಸಂಪೂರ್ಣವಾಗಿ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ.<br>• ತಹಶೀಲ್ದಾರ್ ಗ್ರೇಡ್-1, ತಹಶೀಲ್ದಾರ್ ಗ್ರೇಡ್-2 51 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ/509ಇ(1)/2023-24, ದಿನಾಂಕ: 26.02.2024 ನ್ನು ಹೊರಡಿಸಲಾಗಿರುತ್ತದೆ. ಇನ್ನುಳಿದಂತೆ ಕಾಲಕಾಲಕ್ಕೆ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ. |
| ಈ) | ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಕಂದಾಯ ಇಲಾಖೆಯ ಕಛೇರಿಗಳಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ? | ಕಂದಾಯ ಇಲಾಖೆಯಲ್ಲಿ ಪಾರದರ್ಶಕತೆಯನ್ನು ತರಲು ಎಲ್ಲಾ ಕಛೇರಿಗಳಲ್ಲಿ ಇ-ತಂತ್ರಾಂಶವನ್ನು (E-Office) ಜಾರಿಗೆ ತರಲಾಗಿರುತ್ತದೆ. ಅಲ್ಲದೆ, ಸ್ವೀಕೃತಿ ಹಾಗೂ ವಿಲೇವಾರಿಗೆ ಸಂಬಂಧಿಸಿದಂತೆ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮೇಲ್ವಿಚಾರಣೆ ನಡೆಸಲಾಗುತ್ತಿದೆ. |

ಸಂಖ್ಯೆ: ಕಂಇ 405 ಬಿಎಂಎಂ 2024.

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

<u>ಅನುಬಂಧ</u>

**ಕಂದಾಯ ಇಲಾಖೆಯಲ್ಲಿ ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರ**

| ಕ್ರ. ಸಂ. | ಜಿಲ್ಲೆ | ಖಾಯಂ | ಗುತ್ತಿಗೆ ಆಧಾರ |
|---|---|---|---|
| 1. | ಬೆಂಗಳೂರು ನಗರ | 495 | 1 |
| 2. | ರಾಮನಗರ | 383 | 1 |
| 3. | ಚಿಕ್ಕಬಳ್ಳಾಪುರ | 595 | 0 |
| 4. | ಕೋಲಾರ | 481 | 0 |
| 5. | ತುಮಕೂರು | 934 | 0 |
| 6. | ಚಿತ್ರದುರ್ಗ | 569 | 0 |
| 7. | ದಾವಣಗೆರೆ | 500 | 0 |
| 8. | ಶಿವಮೊಗ್ಗ | 647 | 0 |
| 9. | ಬೆಂಗಳೂರು ಗ್ರಾಮಾಂತರ | 355 | 1 |
| 10. | ಬೆಳಗಾವಿ | 1042 | 0 |
| 11. | ಬಾಗಲಕೋಟೆ | 575 | 0 |
| 12. | ವಿಜಯಪುರ | 584 | 0 |
| 13. | ಧಾರವಾಡ | 457 | 0 |
| 14. | ಗದಗ | 352 | 0 |
| 15. | ಹಾವೇರಿ | 491 | 0 |
| 16. | ಉತ್ತರ ಕನ್ನಡ | 603 | 0 |
| 17. | ಕಲಬುರಗಿ | 753 | 3 |
| 18. | ಬೀದರ | 609 | 0 |
| 19. | ಬಳ್ಳಾರಿ | 403 | 9 |
| 20. | ರಾಯಚೂರು | 594 | 8 |
| 21. | ಕೊಪ್ಪಳ | 421 | 8 |
| 22. | ಯಾದಗಿರಿ | 216 | 5 |
| 23. | ವಿಜಯನಗರ | 381 | 7 |
| 24. | ಮೈಸೂರು | 755 | 0 |
| 25. | ಮಂಡ್ಯ | 733 | 62 |
| 26. | ಚಾಮರಾಜನಗರ | 351 | 0 |
| 27. | ಹಾಸನ | 721 | 0 |
| 28. | ಕೊಡಗು | 262 | 0 |
| 29. | ಚಿಕ್ಕಮಗಳೂರು | 525 | 0 |
| 30. | ದಕ್ಷಿಣ ಕನ್ನಡ | 455 | 0 |
| 31. | ಉಡುಪಿ | 337 | 0 |
| | **ಒಟ್ಟು** | **16579** | **105** |